2.72 (120)

ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಅರುಣ ಶಹಾಪೂರ, ವಿಧಾನ ಪರಿಷತ್ತು ಸದಸ್ಯರು, ನಿಯಮ 72 ರ ಅಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಸೂಚನೆ

ಭಾಷಾ ಅಲ್ಪಸಂಖ್ಯಾತ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ರೋಸ್ಟರ್ ವಿನಾಯಿತಿ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಸಮಾಜ ಕಲ್ಯಾಣ ಇಲಾಖೆಯ ಅಭಿಪ್ರಾಯ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಇದುವರೆಗೂ ಯಾವುದೇ ಅಭಿಪ್ರಾಯ ನೀಡದೇ ಇರುವುದರಿಂದ ಹುದ್ದೆಗಳ ಭರ್ತಿಗೆ ಸಮಸ್ಯೆಯಾಗಿರುವ ಕಾರಣ ರೋಸ್ಟರ್ ವಿನಾಯಿತಿ ಕುರಿತು ಸಮಾಜ ಕಲ್ಯಾಣ ಇಲಾಖೆಯ ಅಭಿಪ್ರಾಯವನ್ನು ನೀಡುವಂತೆ ಸಮಾಜ ಕಲ್ಯಾಣ ಸಚಿವರ ಗಮನ ಸಳೆಯ ಬಯಸುತ್ತೇನೆ.

ಉತ್ತರ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯವರು ಈಗಾಗಲೇ ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 9744/2012 (ಇಡಿಎನ್-ಆರ್‌ಇಜಿ-ಪಿ) ಫ್ರೆಂಡ್ಸ್ ಕಲ್ಚರಲ್ ಎಜುಕೇಷನ್ ಟ್ರಸ್ಟ್ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಮತ್ತಿತರರು ಪ್ರಕರಣದಲ್ಲಿ ದಿನಾಂಕ: 25.10.2013 ರಲ್ಲಿ ನೀಡಿರುವ ತೀರ್ಪು ಬಗ್ಗೆ ಈಗಾಗಲೇ ಕಾನೂನು ಇಲಾಖೆಯ ಅಭಿಪ್ರಾಯ ಪಡೆದಿರುತ್ತಾರೆ. ಕಾನೂನು ಇಲಾಖೆಯ ಅಭಿಪ್ರಾಯ ಕೆಳಕಂಡಂತಿದೆ.

> ***"The Hon'ble High Court in the above referred Writ Petition 9744/2012 has held that Linguistic Minority Institutions need not follow roster system in appointments. The judgment of the Hon'ble High Court is based on the principles laid down by the Hon'ble Supreme Court in Sindhi Education Society 's case. Now the respondents cannot question the judgment of Hon'ble Supreme Court in Sindhi Education Society's case. Therefore, there are no grounds to file appeal against the orders of Hon'ble High Court passed in Writ Petition 9744/2012 dated 12.10.2013. The judgment of the Hon'ble High Court is just and fair and it is based on settled principles of law. Under these circumstances, this is not a fit case to file appeal and there are no grounds to file appeal".***

ಆದುದರಿಂ, ಮಾನ್ಯ ನ್ಯಾಯಾಲಯಗಳ ತೀರ್ಪು ಹಾಗೂ ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯದನುಸಾರ ಕ್ರಮವಹಿಸಬಹುದಾಗಿದೆಯೆಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ದಿನಾಂಕ:09.03.2021 ರಂದು ತಿಳಿಸಲಾಗಿದೆ.

ಸಕಇ 18 ಎಸ್‌ಟಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು